ಆರಾಮ ಎನಿಸುವ ಬಿಸ್ನೆಸ್ ಕ್ಲಾಸಿನಲ್ಲಿ ಮಲಗಿದ್ದರೂ ರಾಗಿಣಿಯವರಿಗೆ ಸ್ವಲ್ಪವೂ ನಿದ್ದೆಯಿಲ್ಲ. "ಸುನಿಲ್, ನಮ್ಮನ್ನೆಲ್ಲಾ ತೊರೆದು ಮದುವೆಯಾಗಿ ಮೂರು ವರ್ಷವಾದವು. ಒಂದು ಇ – ಮೇಲ್ ಇಲ್ಲ, ಒಂದು ಬಾರಿಯೂ ಫೋನ್ ಮಾಡಿಲ್ಲ. ಈಗ ಏಕೆ ಅವನ ಹೆಂಡತಿ ರಿಂಕೊ ಇ – ಮೇಲ್ ಕಳಿಸಿದ್ದಾಳೆ? ಏಕೆ ನನ್ನನ್ನು ಬನ್ನಿ ಎಂದು ಕರೆದಿದ್ದಾಳೆ? ಮೊಮ್ಮಗನನ್ನು ಬಂದು ನೋಡಿ ಎಂದೇನೋ ಹೇಳಿದ್ದಾಳೆ. ಇದ್ದಕ್ಕಿದ್ದಂತೆ ಏಕಿದು? ಸುನಿಲ್ ಹುಷಾರಾಗಿದ್ದಾನೆ ತಾನೇ?" ಆಕೆಗೆ ಉತ್ತರ ಹೊಳೆಯುತ್ತಿಲ್ಲ. ಪ್ರತಿನಿಮಿಷಕ್ಕೂ ಗಗನಸಖಿ ಅದೂ ಇದೂ ಪಾನೀಯ, ತಿಂಡಿಗಳನ್ನು ತಂದು ಉಪಚರಿಸುತ್ತಿದ್ದಾಳೆ. ಅದಾವುದೂ ಬೇಡ ಅವರಿಗೆ; ತಡೆಯಲಾರದೆ ಕೊನೆಗೆ "ನನ್ನನ್ನು ಡಿಸ್ಟರ್ಬ್ ಮಾಡಬೇಡಿ" ಎಂದು ಸೂಚನೆ ನೀಡಿದರು. ನ್ಯೂಯಾರ್ಕಿನಿಂದ ಟೋಕಿಯೊಗೆ ಹದಿನಾಲ್ಕು ಗಂಟೆಗಳ ಪ್ರಯಾಣ; ಕಳೆಯುವುದು ಹೇಗೆ ಎನಿಸಿತು. ನೆನಪುಗಳು ಒಂದರ ಮೇಲೊಂದು ಮರುಕಳಿಸಿದವು.

ರಾಗಿಣಿ ಮತ್ತು ಅವಳ ಗಂಡ ಪ್ರಶಾಂತ್ ಅಗರ್ವಾಲ್ ಸುಮಾರು ಮೂವತ್ತು ವರ್ಷಗಳ ಹಿಂದೆ ಭಾರತದಿಂದ ಅಮೆರಿಕಾಗೆ ವಲಸೆ ಬಂದವರು. ಗಂಡ ಓದಿದವರಲ್ಲ. ಆದರೆ, ವಾಣಿಜ್ಯದಲ್ಲಿ ನುರಿತವರು. ನ್ಯೂಯಾರ್ಕಿಗೆ ಬಂದು ನೆಲೆಸುತ್ತಿದ್ದಂತೆ ಹಲವಾರು ವ್ಯವಹಾರಗಳಲ್ಲಿ ತೊಡಗಿ ಹಣವನ್ನೇ ತಮ್ಮ ಜೀವನದ ಗುರಿಯನ್ನಾಗಿ ಮಾಡಿಕೊಂಡಿದ್ದರು. ಅವರು ಕೊಂಡು, ಮಾರದ ವಸ್ತುವಿಲ್ಲ; ಸೂಜಿಯಿಂದ ಪ್ರಾರಂಭವಾಗಿ ಕಟ್ಟಡಗಳವರೆಗೆ. ಸಹಜವಾಗಿ ಅವರ ಬಳಿ ಹಣ ಬೆಳೆಯುತ್ತಾಹೋಯಿತು. ದೊಡ್ಡಮನೆ ಆಯಿತು, ಸುತ್ತ ಮುತ್ತಾ ಇದ್ದ ಮನೆಗಳನ್ನು ಕೊಂಡು ಬಾಡಿಗೆಗೆ ಕೊಟ್ಟರು, ಆಧುನಿಕ ಕಾರುಗಳು ಬಂದು ಸೇರಿದವು. ಕೊನೆಗೆ ಅವರು ಪೂರಾ ಅಮೆರಿಕನ್ ಆಗಿಹೋದರು. ಯಾವುದೇ ಸರಳ ವಿಷಯವಾದರೂ ಸರಿ, ಅದನ್ನು ವ್ಯವಹಾರದ ಚೌಕಟ್ಟಿನಲ್ಲಿಟ್ಟು ತೂಗಿನೋಡಿ ನಿವ್ವಳ ಲಾಭ ಎಷ್ಟು ಎಂದು ಲೆಕ್ಕಾ ಹಾಕಿದ ನಂತರವೇ ಮುಂದುವರಿಯುತ್ತಿದ್ದರು. ರಾಗಿಣಿ ಗಂಡನಿಗೆ ಬೆಂಬಲ ನೀಡಿದರು. ಇಬ್ಬರು ಮಕ್ಕಳು – ಸವಿತಾ ಮತ್ತು ಸುನಿಲ್.

ರಾಗಿಣಿ ಮತ್ತು ಅಗರ್ವಾಲ್ ಅವರಿಗೆ ಅಮೆರಿಕನ್ ಜನರಂತೆಯೇ ವರ್ತಿಸುವ ಹಂಬಲ. ಆದರೆ, ಅವರ ಅಂತರ್ಯವೆಲ್ಲಾ ಭಾರತಿಯವೇ. ತಮ್ಮ ವಹಿವಾಟುಗಳಲ್ಲಿ ಏರುಪೇರಾದಾಗ ಅಗರ್ವಾಲ್ ಮೊರೆಹೋಗುತ್ತಿದ್ದದ್ದು ತಿರುಪತಿಯ ವೆಂಕಟೇಶನನ್ನು. ರಾಗಿಣಿ ಮನೆಯಲ್ಲಿ ಸದಾ ವಿಷ್ಣು ಸಹಸ್ರ ನಾಮ, ಲಲಿತಾ ಸಹಸ್ರನಾಮ, ಹನುಮಾನ್ ಚಾಲೀಸ, ಶುದ್ಧಬ್ರಹ್ಮ ಪರಾತ್ಪರ ರಾಮ ಮುಂತಾದುವನ್ನು ಹೇಳಿಕೊಂಡಿದ್ದೇ ಹೇಳಿಕೊಂಡಿದ್ದು. ಆದರೆ, ಮಕ್ಕಳನ್ನು ಅಭಾರತೀಯವಾಗಿ ಬೆಳೆಸಿದರು. ಅತ್ಯಂತ ಹೆಚ್ಚು ಫೀಸ್ ವಸೂಲಿ ಮಾಡುವ ಖಾಸಗಿ ಶಾಲೆಗಳಲ್ಲಿ ಅವರ ವಿದ್ಯಾಭ್ಯಾಸ. ಅವರು ಸದಾ